ಬಂಡಾಯ ಸಾಹಿತ್ಯ ಪರಂಪರೆಯ ಹಿನ್ನೆಲೆ - ಒಂದು ಅವಲೋಕನ

***ರವಿಕುಮಾರ್ .ಹೆಚ್.ಈ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ.**

ಪೀಠಿಕೆ:

ಅಸ್ಪೃಶ್ಯತೆಯನ್ನು ಒಳಗೊಂಡಂತೆ ಜಾತಿ, ಧರ್ಮ, ಲಿಂಗ, ಪ್ರದೇಶ, ಭಾಶೆ, ಪ್ರತಿಭೆ ಹೀಗೆ ಯಾವುದೆ ನೆಲೆಯಲ್ಲಿನ ಅಸಮಾನ ಆಚಾರಗಳನ್ನು ವಿರೋಧಿಸುವುದು ಮತ್ತು ತೊಡೆದು ಹಾಕುವುದು ದಲಿತ-ಬಂಡಾಯದ ಆಶಯ. ಸಾಹಿತ್ಯದ ಓದು, ಬರವಣಿಗೆ ಮತ್ತು ಬದುಕು ಎಲ್ಲ ಕಡೆ ಸಾಮಾಜಿಕ ನ್ಯಾಯದ ಪ್ರಜ್ಞೆ, ಬದ್ಧತೆ, ಸೌಹಾರ್ದತೆ, ಸರ್ವೋದಯಕ್ಕಾಗಿ ತುಡಿಯುವ ಸಂವೇದನೆಗಳು ಇರಬೇಕು ಎಂಬುದೆ ದಲಿತ-ಬಂಡಾಯದ ತಾತ್ವಿಕತೆ. ಉಂಡು ತೇಗುವವರ ಆನಂದಕ್ಕಾಗಿ ರಂಜನೀಯವಾಗಿ ಬರೆಯುವುದಕ್ಕಿಂತ ಸಮಾಜದಲ್ಲಿ ಹಲವು ರೀತಿಯ ದುಃಖಗಳಿವೆ, ಹುಳುಕುಗಳಿವೆ; ಅವನ್ನು ಎತ್ತಿ ತೋರಿಸಲು ಬರೆಯಬೇಕು; ಸುಖದ ಕುರಿತು ಬರೆಯುವುದಕ್ಕಿಂತ ಸಮಾಜದಲ್ಲಿನ ದುಃಖ ಮತ್ತು ದುಃಖಿತರ ಅನುಸಂಧಾನವೆ ಕತೆಯ ಕಾರ್ಯ ಆಗಬೇಕು ಎಂಬುದು ಬಂಡಾಯ ಕತೆಗಳ ನಿಲುವು. ಇಲ್ಲಿನ ಕತ್ತಲು, ಕೇಡು, ಅಸಮಾನತೆ, ಬಡತನ, ಹಸಿವು, ದೌರ್ಜನ್ಯ, ಸ್ವಜನಪಕ್ಷಪಾತ, ಮೌಢ್ಯಗಳನ್ನೆಲ್ಲ ಎತ್ತಿ ತೋರಿಸಲು ಮತ್ತು ಇವುಗಳಿಂದ ಸಮಾಜವನ್ನು ಆದಶ್ಟು ಮುಕ್ತಿಗೊಳಿಸಲು ಬರೆಯಬೇಕು ಎಂಬ ತಾತ್ವಿಕತೆಯೊಂದು ಈ ಕತೆಗಳ ಆಳದಲ್ಲಿದೆ. ಸಮಾಜದಲ್ಲಿ ಕೇಡು-ಹುಳುಕು ಮಾತ್ರ ಇದೆ ಎಂಬುದು ಈ ಕತೆಗಳ ನಿಲುವಲ್ಲ. ಇರುವ ಕೆಡುಕು ಇಲ್ಲವಾಗಬೇಕು ಎಂಬುದು ಇವುಗಳ ಆಶಯ. ನಗರ ಮತ್ತು ಗ್ರಾಮ ಎರಡೂ ಪರಿಸರಗಳ ಕಥನ ಇಲ್ಲಿದ್ದರೂ ಗ್ರಾಮೀಣ ಪರಿಸರದ ನಿರೂಪಣೆಯೆ ಇಲ್ಲಿ ಹೆಚ್ಚು.

ದಲಿತ-ಬಂಡಾಯ ಎಂಬ ಪರಿಭಾಶೆಯು ಮೇಲ್ನೋಟಕ್ಕೆ ಜನಾಂಗೀಯ ಆಗಿ ಕಾಣುತ್ತದೆ. ಆದರೆ ಹಾಗೆ ಇದನ್ನು ಕಣ್ಣುಪಟ್ಟಿ ಕಟ್ಟಿಕೊಂಡು ನೋಡಬೇಕಿಲ್ಲ. ಈ ಸಂವೇದನೆಗಳು ಕಾಲಾತೀತ ಹೇಗೋ ಹಾಗೆ ಜಾತ್ಯತೀತ ಕೂಡ. 1970-2000 ಈ ಕಾಲದ ನಡುವೆ ಮತ್ತು ಆಚೀಚೆ ಈ ಸಂವೇದನೆಯನ್ನು ಗುರ್ತಿಸುತ್ತಾರೆ. ಹಾಗೆಯೆ ಬ್ರಾಹ್ಮಣ, ಅಬ್ರಾಹ್ಮಣ, ದಲಿತ, ಮುಸ್ಲಿಂ, ಮಹಿಳೆ, ದಲಿತ ಮಹಿಳೆ, ಅನ್ಯಲಿಂಗಿ, ಬುಡಕಟ್ಟು, ಅಲೆಮಾರಿ ಹೀಗೆ ಎಲ್ಲೆಡೆಯೂ ಈ ಬರವಣಿಗೆ ಚಾಚಿಕೊಂಡಿದೆ. ದಲಿತ-ಬಂಡಾಯ ಸಾಹಿತ್ಯ ಚಳವಳಿಯನ್ನು ಹೀಗೆ ದಲಿತ ಮತ್ತು ಬಂಡಾಯ ಎಂದು ಎರಡೊಂದಾದ ಸಂವೇದನೆಯ ಹಾಗೆ ಯಾಕೆ ಗುರ್ತಿಸಿಕೊಳ್ಳುವ ಪರಿಪಾಠ ರೂಢಿಯಾಯಿತು? ದಲಿತ ಮತ್ತು ಶೂದ್ರ ಎರಡೂ ಸಮುದಾಯಗಳು ಶೋಶಣೆಯ ಪ್ರತಿರೋಧಿ ಸಾಹಿತ್ಯವನ್ನು ರಚಿಸತೊಡಗಿದಾಗ ದಲಿತರ ನೋವು ಮತ್ತು ಅನುಭವ ಇತರರ ನೋವು ಮತ್ತು ಅನುಭವಗಳಿಗಿಂತ ಭಿನ್ನ ಮತ್ತು ವಿಶಿಶ್ಟ ಎಂದು ಪ್ರತಿಷ್ಠಾಪಿಸಲು ಹೀಗೆ ಈ ಚಳಚಳಿಯು ಎರಡೊಂದಾಗಿ ರೂಪಗೊಂಡಿದೆ. ಅಸ್ಪೃಶ್ಯತೆಯ ಅವಮಾನವನ್ನು ಅನುಭವಿಸಿರುವ ದೀನರು ಬರೆದದ್ದು ದಲಿತ ಆದರೆ; ಅನುಭವಿಸಿಲ್ಲದ ದೀನರು ಬರೆದದ್ದು ಹಾಗೂ ಪ್ರತಿಭಟನೆಯ ಪರವಾದ ಎಲ್ಲ ಬಗೆಯ ದನಿಗಳು ಬಂಡಾಯ ಎನ್ನಿಸಿಕೊಳ್ಳುತ್ತವೆ. ಲೇಖಕರಿಗೆ ತಮ್ಮ ಆರ್ಥಿಕ, ಸಾಮಾಜಿಕ, ಲಿಂಗಿಕ, ವಾಂಶಿಕ, ಜಾತೀಯ ಚಹರೆ ಮತ್ತು ಮಿತಿಗಳನ್ನು ದಾಟಿ ಬರೆಯಲು ಆಗುವುದಿಲ್ಲವೆ ಎಂಬುದು ಯಾವತ್ತಿನ ಪ್ರಶ್ನೆಯೇ

ಆಗಿದೆ. ಇಲ್ಲಿ ಆಗುತ್ತದೆ ಮತ್ತು ಆಗುವುದಿಲ್ಲ ಎಂಬ ಎರಡೂ ನಂಬಿಕೆಗಳು ನಮ್ಮಲ್ಲಿವೆ. ಎರಡೂ ಹೌದು ಕೂಡ.

ಮಾರ್ಕ್ಸ್ ವಾದ, ಲೋಹಿಯಾವಾದ, ಅಂಬೇಡ್ಕರ್ ವಾದ, ಗಾಂಧಿವಾದ, ಪೆರಿಯಾರ್‌ವಾದ, ಬೌದ್ಧವಾದ, ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್ ಚಳವಳಿ, ತೆಲುಗಿನ ದಿಗಂಬರ ಕಾವ್ಯ ಹೀಗೆ ಹಲವು ಕಡೆಗಳಿಂದ ಪ್ರೇರಣೆಗಳನ್ನು ಪಡೆದ ದಲಿತ-ಬಂಡಾಯ ಚಳವಳಿಯು ರೂಪಗೊಂಡದ್ದು 70ರ ದಶಕದ ಆರಂಭದಲ್ಲಿ. 1973ರಲ್ಲಿ ಮೈಸೂರಿನಲ್ಲಿ ಜಾತಿವಿನಾಶ ಸಮ್ಮೇಳನ ಜರುಗಿತು. 1974ರಲ್ಲಿ ಕಲಾವಿದರ ಮತ್ತು ಬರಹಗಾರರ ಒಕ್ಕೂಟವನ್ನು ಕುವೆಂಪು ಉದ್ಘಾಟಿಸಿದರು. ಇದೇ ವರ್ಷ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪಗೊಂಡಿತು. 1975 ರಲ್ಲಿ ತುರ್ತುಪರಿಸ್ಥಿತಿ ಹೇರಲ್ಪಟ್ಟಿತು. ಆಗ ಬಂಡಾಯ ಪ್ರಜ್ಞೆಯ ಹಲವರು ಜೈಲಿಗೂ ಹೋಗಿ ಬಂದರು. 1976ರಲ್ಲಿ ಭದ್ರಾವತಿಯಲ್ಲಿ ದಲಿತ ಬರಹಗಾರರ ಯುವ ಸಂಘಟನೆ ಆರಂಭವಾಯಿತು. 1979ರಲ್ಲಿ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯಕ್ಕೆ ಪ್ರತ್ಯೇಕ ಗೋಷ್ಠಿ ಏರ್ಪಾಟಾಗಲಿಲ್ಲ ಎಂಬ ಕಾರಣಕ್ಕೆ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ಜರುಗಿತು. 1983ರಲ್ಲಿ ದಲಿತ ಸಾಹಿತ್ಯವು ಬಂಡಾಯದಿಂದ ಭಿನ್ನ ಎಂಬ ವಾದ ಜೋರಾಯಿತು. 1983ರ ಡಿಸೆಂಬರ್ ನಲ್ಲಿ ಧಾರವಾಡದಲ್ಲಿ 'ದಲಿತ ಲೇಖಕರ ಕಾಲವಿದರ ಬಳಗ' ರಚನೆಯಾಯಿತು. ದಲಿತ ಸಂಘರ್ಷ ಸಮಿತಿಯೂ ಇಬ್ಭಾಗವಾಯಿತು. ಇದರ ಪರಿಣಾಮವಾಗಿ 1986ರ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ದಲಿತ ಸಾಹಿತ್ಯ ಸಮಾವೇಶವೂ ನಡೆಯಿತು. ಇದೆಲ್ಲ ಈಗ ಇತಿಹಾಸ. ಈಗ ಕನ್ನಡ ವಿಮರ್ಶೆ ಮತ್ತು ಸಾಹಿತ್ಯ ಲೋಕ ದಲಿತ-ಬಂಡಾಯ ಎರಡನ್ನೂ ಒಂದೆ ಜೋಡಿಕಲ್ಪನೆ ಆಗಿ ಕಾಣುತ್ತಿದೆ.

ಜಾತಿ ಕೇಂದ್ರಿತವಾಗಿ ಮತ್ತು ಲೇಖಕ ಕೇಂದ್ರಿತವಾಗಿ ಸಾಹಿತ್ಯವನ್ನು ನೋಡದೆ, ಸಂವೇದನೆಯ ನೆಲೆಯಿಂದ ನೋಡಿದಾಗ ದಲಿತ-ಬಂಡಾಯ ಸಾಹಿತ್ಯ ಪರಂಪರೆ ಆಧುನಿಕ ಕಥಾ ವಿಭಾಗದಲ್ಲಿ 70ರ ದಶಕದಿಂದ ಬಹಳೇ ಹಿಂದಕ್ಕೆ ಹೋಗುತ್ತದೆ. ಕೊರಡ್ಕಲ್ ಶ್ರೀನಿವಾಸರಾಯರ ಧನಿಯರ ಸತ್ಯನಾರಾಯಣ, ಜಿ.ವೆಂಕಟಯ್ಯನವರ ಮಗಳ ಮಾಂಗಲ್ಯ, ಕುವೆಂಪು ಅವರ ಸಾಲದ ಮಗು, ಯಾರೂ ಅರಿಯದ ವೀರ ಕತೆಗಳಲ್ಲದೆ ಆನಂದಕಂದರ ಮಾಲ್ಕಿ ಹಕ್ಕು, ಜೋಗತಿ ಕಲ್ಲು, ಮಾಸ್ತಿಯವರ ವೆಂಕಟಿಗನ ಹೆಂಡತಿ, ಶ್ಯಾಮಲಾ ಬೆಳಗಾಂವಕರ ಅವರ ಜೋಗಿತಿ ದ್ಯಾಮಕ್ಕ, ಭಾರತೀಪ್ರಿಯರ ಮೋಚಿ, ನಿರಂಜನರ ಕೊನೆಯ ಗಿರಾಕಿ, ತೇಜಸ್ವಿ ಅವರ ತಬರನ ಕತೆ, ಲಂಕೇಶರ ಒಂದು ಬಾಗಿಲು, ಎಸ್.ದಿವಾಕರರ ಕ್ರೌರ್ಯ ಹೀಗೆ ಹತ್ತು ಹಲವು ಸಣ್ಣ ಕತೆಗಳನ್ನು ಈ ಪರಂಪರೆಯಲ್ಲಿ ಕಾಣಬಹುದು. ಆದರೆ ನೀರಮಾನ್ವಿ ಅವರ ದುರಸ್ತಿ ಮತ್ತು ದೇವನೂರರ ಮಾರಿಕೊಂಡವರು ಕತೆಯ ನಂತರದ ಕತೆಗಳನ್ನು 'ದಲಿತಬಂಡಾಯ ಕತೆಗಳು' ಎಂದು ಕರೆದುಕೊಳ್ಳುವುದು ಸದ್ಯಕ್ಕೆ ರೂಢಿಯಲ್ಲಿದೆ.

70ರ ದಶಕದ ಆಚೀಚೆ ಬರೆಯುತ್ತಿದ್ದ ಹಲವು ಲೇಖಕರಲ್ಲಿ ಒಬ್ಬರಾದ ಲಂಕೇಶರ ಕೆರೆಯ ನೀರನು ಕೆರೆಗೆ ಚೆಲ್ಲಿ ಸಂಕಲನದ ಕತೆಗಳು ನವ್ಯ ಪ್ರಜ್ಞೆಯ ಕತೆಗಳಾದರೆ ಅವರ ಸಹಪಾಠಿ, ಮುಟ್ಟಿಸಿಕೊಂಡವನು, ಒಂದು ಬಾಗಿಲು ಇಂತಹ ಕತೆಗಳು ಬಂಡಾಯ ಪ್ರಜ್ಞೆಯ ಕತೆಗಳಾಗಿವೆ. ಹಾಗೆಯೆ ತೇಜಸ್ವಿಯವರ ಸ್ವರೂಪ, ನಿಗೂಢ ಮನುಷ್ಯರು ನವ್ಯ ಸಂವೇದನೆಯ ಕತೆಗಳಾದರೆ ಇವರ ತಬರನ ಕತೆ, ಕುಬಿ ಮತ್ತು ಇಯಾಲ ಬಂಡಾಯದ ಕತೆಗಳು. ಇವರ ಅವನತಿ, ಕಿರಗೂರಿನ ಗಯ್ಯಾಳಿಗಳು, ಜುಗಾರಿ ಕ್ರಾಸ್ ಇವು ಈ ಎರಡೂ ಮಾರ್ಗದ ಆಚೆಗಿನ ಕಥನಗಳಾಗಿವೆ. ಬೆಸಗರಹಳ್ಳಿ ರಾಮಣ್ಣನವರ ಕತೆಗಳು ಅತ್ತ ಪ್ರಗತಿಶೀಲವೂ ಇತ್ತ ಬಂಡಾಯವೂ ಎರಡೂ ಪ್ರಜ್ಞೆ ಇರುವ ಕತೆಗಳಾದರೆ; ನೀರಮಾನ್ವಿ ಅವರ ಮೊದಲ ಸಂಕಲನದ ಕತೆಗಳು

ನವ್ಯ ಧಾಟಿಯ ಕತೆಗಳಾದರೆ ಎರಡನೆ ಸಂಕಲನವಾದ ಹಂಗಿನರಮನೆಯ ಹೊರಗೆ ಇಲ್ಲಿನ ಕತೆಗಳು ಬಂಡಾಯ ಕತೆಗಳಾಗಿವೆ. ಕೃಷ್ಣಮೂರ್ತಿ ಹನೂರರ ಬಿದ್ದ ಶಿಕಾರಿ, ಕುಂಡಜ್ಜನ ಪರ್ಸಂಗ ಇವು ಜಾನಪದ-ಬುಡಕಟ್ಟು ವಿವರಗಳುಳ್ಳ ಬಂಡಾಯ ಕತೆಗಳು. ಸುಧಾಕರ, ಜೀಶಂಪರವರ ಕತೆಗಳೂ ಇದೇ ವರ್ಗಕ್ಕೆ ಸೇರುತ್ತವೆ. ಕೆ.ವಿ. ತಿರುಮಲೇಶರ ಹಲವು ಕತೆಗಳು ಕೂಡ ಅತ್ತ ನವ್ಯವೂ ಆದ ಇತ್ತ ಬಂಡಾಯವೂ ಆದ ಮದ್ಯಮಮಾರ್ಗಿ ಕತೆಗಳು.

ನಮ್ಮಲ್ಲಿ ಲೇಖಕ ಕೇಂದ್ರಿತವಾಗಿ ಸಾಹಿತ್ಯ ಚಳವಳಿಗಳನ್ನು, ಸಂವೇದನೆಗಳನ್ನು ನೋಡುತ್ತ ಯಾವ ಲೇಖಕ ಯಾವ ಚಳವಳಿಗೆ ಸೇರುತ್ತಾನೆ ಎಂದು ವಿಂಗಡಿಸುವ ಪದ್ಧತಿಯೊಂದು ಚಾಲ್ತಿಯಲ್ಲಿದೆ. ಇದರಿಂದ ಹೆಚ್ಚು ಪ್ರಯೋಜನವಿಲ್ಲ. ಒಬ್ಬನೇ ಲೇಖಕನ ಎಲ್ಲ ಬರವಣಿಗೆಯನ್ನು ಒಂದೇ ಸಂವೇದನೆ-ಚಳವಳಿಯ ಚೌಕಟ್ಟಿಗೆ ಹಾಕಲು ಆಗುವುದಿಲ್ಲ. ಹಾಗೆಯೇ ಒಂದು ಸಂವೇದನೆ-ಪ್ರಜ್ಞೆಯನ್ನು ಒಂದು ನಿರ್ದಿಶ್ಟ ಕಾಲಮಾನಕ್ಕು ನಿಗಧಿಗೊಳಿಸಲು ಆಗುವುದಿಲ್ಲ. ಒಂದೇ ಕಾಲದಲ್ಲಿ ಹಲವು ಪ್ರಜ್ಞೆ, ಸಂವೇದನೆಗಳು ಇರುತ್ತಲೆ ಒಬ್ಬನೆ ಲೇಖಕನಲ್ಲು ಅವು ಇರಬಹುದು. ಹೀಗಾಗಿ ಕಾಲದ ಮೂಲಕ, ಲೇಖಕನ ಮೂಲಕ, ಚಳವಳಿಯ ವರ್ಗೀಕರಣದ ಮೂಲಕ ಸಾಹಿತ್ಯವನ್ನು ನೋಡುವ ಕ್ರಮ ಹಲವು ಮಿತಿಗಳಿಂದ ಕೂಡಿದೆ.

ಉಪಸಂಹಾರ:

ಬಂಡಾಯ ಕಾಲಮಾನದಲ್ಲೆ ಕತೆಗಳನ್ನು ಬರೆದವರನ್ನು, ಬರೆಯುತ್ತಿರುವವರನ್ನು ಯಾವ ಚೀಲಕ್ಕೆ ಹಾಕುವುದು? ನವೋದಯ-ನವ್ಯ ಕಾವ್ಯಗಳ ಜೊತೆಗೆ ಸಮನ್ವಯ ಎಂಬ ಚೀಲವೊಂದನ್ನು ಸೃಶ್ಟಿಸಿಕೊಂಡ ಹಾಗೆ ಈಗಲೂ ಬಂಡಾಯ ಬಂಡಾಯೋತ್ತರಗಳ ಮಧ್ಯೆ ಸಮನ್ವಯ ಒಂದನ್ನು ಸೃಶ್ಟಿಸಿಕೊಳ್ಳಬೇಕಶ್ಟೆ. ಈ ಇಂತಹ ವರ್ಗೀಕರಣ ಮತ್ತು ನಾಮಕರಣ ಕ್ರಮ ಯಾವತ್ತೂ ಸಮಸ್ಯಾತ್ಮಕ ಮತ್ತು ಅಪರಿಪೂರ್ಣ. ಅಲ್ಲದೆ ನವ್ಯದ ನಂತರ ಬಹುಕಾಲ ನವ್ಯೋತ್ತರ ಎಂದು ಕರೆಯುತ್ತಿದ್ದೆವು. ಈಗ ನವ್ಯೋತ್ತರ ಎನ್ನುವುದನ್ನು ದಲಿತ -ಬಂಡಾಯ ಎನ್ನುತ್ತಿದ್ದೇವೆ. ದಲಿತ-ಬಂಡಾಯದಲ್ಲಿ ಸೇರಿಸಲು ಆಗದವರನ್ನು ಗುರ್ತಿಸಲು ಮತ್ತು ಪೋಸ್ಟ್ ಮಾಡರ್ನ್ ಅನ್ನು ಗುರ್ತಿಸಲು ಕೂಡ ನವ್ಯೋತ್ತರ ಪರಿಭಾಶೆ ಬಳಸುತ್ತಿದ್ದೇವೆ. ದಲಿತ ಬಂಡಾಯೋತ್ತರ ಎಂಬ ಪರಿಭಾಶೆಯನ್ನೂ ಸಾಮಾನ್ಯವಾಗಿ ಬಳಸುತ್ತಿದ್ದೇವೆ. ಆದರೆ ಬಂಡಾಯದ ನಂತರ ಮುಂದೇನು ಎಂಬ ಪ್ರಶ್ನೆ ಬಹು ದಿನಗಳಿಂದಲೂ ಕಾಡುತ್ತಿದೆ. ಅದಕ್ಕಿನ್ನೂ ಕಾಲ ಕೂಡಿ ಬಂದಿಲ್ಲವೆಂದು ಕಾಣುತ್ತದೆ.

ಆಕರ ಗ್ರಂಥಗಳು:

- ಬಂಡಾಯ ದಲಿತ-ಚಳುವಳಿ ಮತ್ತು ಸಾಹಿತ್ಯ, ಡಾ. ಪುರುಷೋತ್ತಮ ಬಿಳಿಮಲೆ, ಅಭಿನವ ಪ್ರಕಾಶನ, ೨
- ಬಂಡಾಯ-ದಲಿತ ಸಾಹಿತ್ಯ, ಡಾ. ಡಾ. ಪುರುಷೋತ್ತಮ ಬಿಳಿಮಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨
- ಶತಮಾನದ ಸಾಹಿತ್ಯ ವಿಮರ್ಶೆ– ಸಂ. ಡಾ. ಎಚ್.ಎಸ್. ರಾಘವೇಂದ್ರರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.
- ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ. ಸಂಪುಟ - ೧, ನವಕರ್ನಾಟಕ ಪ್ರಕಾಶನ.